

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಾಟಕದ ಸುತ್ತಮುತ್ತ...

ಜೀವನದಲ್ಲಿ ಮನುಷ್ಯನಿಗೆ ಏನೇನೋ ಆಗಬೇಕೆಂಬ ಆಸೆ ಆಕಾಂಕ್ಷೆಗಳಿರುತ್ತವೆ. ಒಬ್ಬನೇ ವ್ಯಕ್ತಿ ಪೋಲೀಸ್ ಅಧಿಕಾರಿ, ಜಿಲ್ಲಾಧಿಕಾರಿ, ನ್ಯಾಯಾಧೀಶ, ಮುಖ್ಯಮಂತ್ರಿ, ಪ್ರಧಾನ ಮಂತ್ರಿ, ಮಠಾಧೀಶ, ಬುದ್ಧ, ಬಸವಣ್ಣ, ಗಾಂಧಿ...... ಹೀಗೆ ಏನೆಲ್ಲಾ ಆಗಲು ಸಾಧ್ಯವೆಂದರೆ ಅದು ನಾಟಕದಲ್ಲಿ ಮಾತ್ರ. ನಾಟಕವನ್ನು ಕುರಿತು ಅಪರೂಪದ ನುಡಿಯೊಂದು ಆಂಗ್ಲಭಾಷೆಯಲ್ಲಿ ಹೀಗಿದೆ: "Dream is a drama when one is asleep; drama is a dream when one is awake" (ಕನಸು ಒಂದು ನಾಟಕ, ಮಲಗಿದ್ದಾಗ ಕಾಣಿಸುವಂತಹದು; ನಾಟಕ ಒಂದು ಕನಸು, ಎಚ್ಚರವಿದ್ದಾಗ ನೋಡುವಂತಹದು). ನಾಟಕ ನೋಡುತ್ತಾ ಇರುವಾಗ ಸಹೃದಯ ಎಚ್ಚರವಿದ್ದೂ ಮೈಮರೆತುಬಿಡುತ್ತಾನೆ; ಅವನು ನಾಟಕದ ಯಾವುದೋ ಒಂದು ಪಾತ್ರದೊಂದಿಗೆ ತನ್ನನ್ನು ತಾನು ಸಮೀಕರಿಸಿಕೊಳ್ಳುತ್ತಾನೆ. ಎಷ್ಟೇ ಕೆಟ್ಟವನಿರಲಿ ಅವನು ಒಳ್ಳೆಯ ಪಾತ್ರಗಳೊಡನೆ ಮಾತ್ರ ಸಮೀಕರಿಸಿಕೊಳ್ಳುತ್ತಾನೆ. ದುರ್ಗುಣವುಳ್ಳವನೂ ಸಹ ಸದ್ಗುಣ ಪಕ್ಷಪಾತಿಯಾಗಿ ನಾಟಕವನ್ನು ಸವಿಯುತ್ತಾನೆ.

ಜೀವನವೂ ಒಂದು ನಾಟಕವೇ. ಆದರೆ ನಾಟಕಕ್ಕೂ ಜೀವನಕ್ಕೂ ಒಂದು ವ್ಯತ್ಯಾಸವಿದೆ. ನಾಟಕದಲ್ಲಿ ಯಾವುದೇ ಪಾತ್ರವನ್ನು ಅಭಿನಯಿಸುವ ಮುಂಚೆ ನಟನಾದವನು ಅನೇಕ ಬಾರಿ ತಾಲೀಮು (rehearsal) ಮಾಡುತ್ತಾನೆ. ತನ್ನ ಅಭಿನಯದಲ್ಲಿರುವ ತಪ್ಪುಗಳನ್ನು ನಿರ್ದೇಶಕ ಸೂಚಿಸಿದಂತೆ ತಿದ್ದಿಕೊಂಡು ಯಶಸ್ವಿಯಾಗಿ ನಟಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಜೀವನವೆಂಬ ನಾಟಕದಲ್ಲಿ ನಾಟಕದ ಪಾತ್ರಧಾರಿಯಂತೆ ತಾಲೀಮು ಮಾಡಲು ಬರುವುದಿಲ್ಲ, ನಾಟಕದ ನಿರ್ದೇಶಕರಂತೆ ಜೀವನಾನುಭವವುಳ್ಳ ಹಿರಿಯರು ಎಷ್ಟೇ ತಿಳಿಹೇಳಿದರೂ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ.

ಹಳ್ಳಿಯಲ್ಲಿ ನಾಟಕವೊಂದು ನಡೆಯುತ್ತಿತ್ತು. ಮುಂದೆ ಕುಳಿತವರು ತುಂಬಾ ಗಲಾಟೆ ಮಾಡುತ್ತಿದ್ದರು. "ಏನ್ರಿ, ಏನ್ ಮಾತಾಡ್ತಾ ಇದ್ದೀರಿ, ಸ್ವಲ್ಪವೂ ಕೇಳಿಸುತ್ತಲೇ ಇಲ್ಲ" ಎಂದು ಹಿಂದೆ ಕುಳಿತವರು ಆಕ್ಷೇಪಣೆ ಮಾಡಿದರು. ಅದಕ್ಕೆ ಮುಂದೆ ಕುಳಿತವರಿಂದ ಬಂದ ಗದರಿಕೆಯ ಉತ್ತರ: "ನಮ್ಮ ಮಾತು ನಿಮಗ್ಯಾಕ್ರಿ ಕೇಳಿಸಬೇಕು? ನೀವ್ಯಾಕ್ರಿ ನಮ್ ಮಾತು ಕದ್ದು ಕೇಳುತ್ತಿದ್ದೀರಿ?"

ಇದನ್ನು ಹೇಳಲು ಒಂದು ಕಾರಣವಿದೆ. ಇತ್ತೀಚೆಗೆ ಸಿರಿಗೆರೆಯಲ್ಲಿ ಚಿತ್ರದುರ್ಗ ಜಿಲ್ಲಾ ನಾಟಕೋತ್ಸವ ಜರುಗಿತು. ಇದರಲ್ಲಿ ವಿದ್ಯಾರ್ಥಿಗಳು ತುಂಬಾ ಉತ್ಸಾಹದಿಂದ ಭಾಗವಹಿಸಿದ್ದರು. ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರು ಪಾಠ ಆರಂಭಿಸುವ ಮೊದಲು ವಿದ್ಯಾರ್ಥಿಗಳ ಹಾಜರಾತಿಯನ್ನು ತೆಗೆದುಕೊಳ್ಳುತ್ತಾರೆ. ಇಂತಿಷ್ಟು ದಿನ ಕಡ್ಡಾಯವಾಗಿ ಹಾಜರಾಗಬೇಕೆಂಬ ನಿಯಮವಿದೆ. ಯಾರು ಬಂದಿದ್ದಾರೆ, ಯಾರು ಬಂದಿಲ್ಲ, ದೀರ್ಘ ಗೈರುಹಾಜರಿ ಯಾರಿದ್ದಾರೆ ಎಂಬೆಲ್ಲ ಅಂಶಗಳನ್ನು ನಿಗಾವಹಿಸಿ ಗಮನಿಸುತ್ತಾರೆ. ಯಾರು ಚಕ್ಕರ್ ಹೊಡೆಯುವ ಅಭ್ಯಾಸ ಇಟ್ಟುಕೊಂಡಿದ್ದಾರೆ ಎಂಬುದನ್ನು ಹದ್ದಿನ ಕಣ್ಣಿನಿಂದ ಪರೀಕ್ಷಿಸಿ ಗದರಿಸುತ್ತಾರೆ. ಆದರೆ ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ ಚಕ್ಕರ್ ಹೊಡೆಯಬಹುದೇ ಹೊರತು ನಾಟಕಗಳಿಗೆ ಚಕ್ಕರ್ ಹೊಡೆಯುವುದಿಲ್ಲ. ಅಂದು ಸಂಜೆ ಅಧ್ಯಾಪಕರು ಹಾಜರಾತಿ ತೆಗೆದುಕೊಳ್ಳದಿದ್ದರೂ ಪೂರ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಹಾಜರಿದ್ದರು. ಎಷ್ಟೇ ಒಳ್ಳೆಯ ಉಪನ್ಯಾಸವಿರಲಿ ಎಲ್ಲ ವಿದ್ಯಾರ್ಥಿಗಳನ್ನು ಏಕರೀತಿಯಲ್ಲಿ ಆಕರ್ಷಿಸುತ್ತದೆ ಎಂದು ಹೇಳಲು ಬರುವುದಿಲ್ಲ. ಆದರೆ ನಾಟಕ ಮಾತ್ರ ಎಲ್ಲರನ್ನೂ ಆಕರ್ಷಿಸುತ್ತದೆ. 'ಕಾವ್ಯೇಷು ನಾಟಕಂ ರಮ್ಯಂ' ಎಂಬ ಸೂಕ್ತಿ ಬಂದದ್ದು ಅದಕ್ಕೇ ಇರಬೇಕು. ದೃಶ್ಯ ಮಾಧ್ಯಮಕ್ಕೆ ಅಂತಹ ಮಾಂತ್ರಿಕ ಶಕ್ತಿ ಇರುತ್ತದೆ. ಶಾಲಾ ವಿದ್ಯಾರ್ಥಿಗಳು ನೋಡುವ/ಕಲಿಯುವ ಒಂದು ನಾಟಕ ಶಾಲೆಯ ಪಠ್ಯಗ್ರಂಥದಲ್ಲಿ ಓದಿದ್ದಕ್ಕಿಂತ ಹೆಚ್ಚು ಪ್ರಭಾವ ಬೀರಬಲ್ಲುದು. ಅದೇ ಕಾರಣಕ್ಕೆ ತರಗತಿಯ ಉಪನ್ಯಾಸಗಳೂ ಸಹ ಆಡಿಯೋ ವೀಡಿಯೋ ತಂತ್ರವನ್ನು ಈಗೀಗ ಒಳಗೊಳ್ಳುತ್ತಿವೆ.

ಹಿಂದೆ ಹಳ್ಳಿಗಳಲ್ಲಿ ನಾಟಕ ಕಲಿಸುವ ಮೇಷ್ಟರುಗಳಿಗೆ ಬಹಳ ಮರ್ಯಾದೆ ಇರುತ್ತಿತ್ತು. ಅವರು ಹಾರ್ಮೋನಿಯಂ ನುಡಿಸುವುದರೊಂದಿಗೆ ನಾಟಕ ಮತ್ತು ಸಂಗೀತ ನಿರ್ದೇಶನ ಮಾಡುತ್ತಿದ್ದರು. ಊರಿನ ಗೌಡರೂ ಅವರ ಜೊತೆ ಬಹಳ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಹಬ್ಬ ಹರಿದಿನಗಳಂದು ಹಳ್ಳಿಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ ನಾಟಕಗಳು ಮನರಂಜನೆಯ ಜೊತೆಗೆ ಮನೋಲ್ಲಾಸವನ್ನು ನೀಡುತ್ತಿದ್ದವು. ಹಳ್ಳಿಯ ಜನರೇ ಪಾತ್ರಧಾರಿಗಳು! ನಾಟಕದ ದಿನ ಇಡೀ ಊರಿನಲ್ಲಿ ಸಂಭ್ರಮದ ವಾತಾವರಣ. ಹತ್ತಿರದ-ದೂರದ ಊರುಗಳಿಂದ ಬಂಧು ಬಾಂಧವರ ಆಗಮನ! ತಮ್ಮ ಅಣ್ಣ/ತಮ್ಮ/ಅಪ್ಪನ ಅಭಿನಯವನ್ನು ಹತ್ತಿರದಿಂದ ನೋಡಿ ಸವಿಯಲು ಸಾಧ್ಯವಾದಷ್ಟೂ ರಂಗಸಜ್ಜಿಕೆಯ ಸಮೀಪದಲ್ಲಿ ಚಾಪೆ/ಜಮಖಾನ ಹಾಸಿಕೊಂಡು ಕುಳಿತು ಕೈಲಿ ಕಾರಮಂಡಕ್ಕಿಯನ್ನೋ ಕುರುಕಲು ತಿಂಡಿಯನ್ನೋ ಹಿಡಿದು ಮೆಲ್ಲುತ್ತಾ ಅಭಿನಯದ ರಸಾಸ್ವಾದನೆ ನಡೆಯುತ್ತಿತ್ತು. ಆಗಾಗ ಕಲಾವಿದನಿಗೆ ಸಂಬಂಧಿಕರು/ಗೆಳೆಯರು/ಅಭಿಮಾನಿಗಳಿಂದ ಆಯರ್ ಅರ್ಪಣೆ. ಇಡೀ ಊರ ಜನರು 'ಕುಟುಂಬ ಪರಿವಾರ ಸಮೇತ' ಬೆಳಗಿನ 'ಬೆಳ್ಳಿಚುಕ್ಕಿ' ಮೂಡುವವರೆಗೂ

ನಾಟಕ ನೋಡುತ್ತಿದ್ದರು. ಸಾಂಸ್ಕೃತಿಕ ಪರಿವೇಷವು ಊರಲ್ಲಿ ಹಬ್ಬುತ್ತಿತ್ತು. ದುರ್ವ್ಯಸನಗಳು, ದ್ವೇಷಾಸೂಯೆಗಳು ಹಳ್ಳಿಗರ ಹತ್ತಿರ ಸುಳಿಯಲು ಅಂಜುತ್ತಿದ್ದವು.

ಹಿಂದಿನ ಕಾಲದಲ್ಲಿ ಹಳ್ಳಿ ಹಳ್ಳಿಗಳಲ್ಲಿ ನಾಟಕದ ತಂಡಗಳಿರುತ್ತಿದ್ದವು. ಇಡೀ ಗ್ರಾಮಸಮುದಾಯವೇ ನಾಟಕ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಿತ್ತು. ತಾಲೀಮಿನ ಹಂತದಿಂದ ಹಿಡಿದು ರಂಗಪ್ರಯೋಗದವರೆಗೆ ಆಬಾಲವೃದ್ಧರು ನಾಟಕದ ತಯಾರಿಯಲ್ಲಿ ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದರು; ಜನರ ಸಿರಿಕಂಠದಲ್ಲಿ ರಂಗಗೀತೆಗಳು ಇಡೀ ಹಳ್ಳಿಯಲ್ಲಿ ಅನುರಣಿಸುತ್ತಿದ್ದವು; ಪುಟಾಣಿ ಮಕ್ಕಳೂ ಸಹ ವಿವಿಧ ಪಾತ್ರಧಾರಿಗಳಾಗಿ ಸಂಭಾಷಣೆಯನ್ನು ಕಲಿತು ನಾಟಕಾಭಿನಯವನ್ನು ಒಂದು ಆಟದಂತೆ ಆಡುತ್ತಿದ್ದರು. ಊರಿನ ಮನಸ್ಸುಗಳನ್ನು ನಾಟಕವು ಸಾಂಸ್ಕೃತಿಕ ಬಂಧದಲ್ಲಿ ಒಗ್ಗೂಡಿಸುತ್ತಿತ್ತು. ಊರ ಜನರ ಒಗ್ಗಟ್ಟಿಗೆ, ಸಹಬಾಳುವೆಗೆ, ಸಾಮರಸ್ಯಕ್ಕೆ ರಂಗಭೂಮಿಯು ಅಪಾರ ಕೊಡುಗೆಯನ್ನು ನೀಡುತ್ತಿತ್ತು.

ಹಿಂದೆಲ್ಲ ನಾಟಕ ಕಂಪನಿಗಳಿದ್ದವು. ಹಳ್ಳಿ ಹಳ್ಳಿಗಳಲ್ಲಿ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜನರ ಮನಸ್ಸನ್ನು ಅವು ಅರಳಿಸುತ್ತಿದ್ದವು. ಈಗ ನಾಟಕಗಳ ಜಾಗದಲ್ಲಿ ದೂರದರ್ಶನ ಹಳ್ಳಿಗಳ ಮನೆ ಮನೆಗಳಿಗೂ ಕಾಲಿಟ್ಟಿದೆ. ವಿವಿಧ ಚಾನಲ್‌ಗಳು ತಮ್ಮ ಟಿ.ಆರ್.ಪಿ ಹೆಚ್ಚಿಸಿಕೊಂಡು ಹಣ ಬಾಚುವ ಗುರಿಯನ್ನಿಟ್ಟುಕೊಂಡಿವೆ. ಅವುಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಜನರ ಮನಸ್ಸನ್ನು ಅರಳಿಸುವ ಬದಲು ವಿಕೃತಗೊಳಿಸುತ್ತಿವೆ. ಹಳ್ಳಿಗರ ಮುಗ್ಧಮನಸ್ಸುಗಳನ್ನು ಕಲುಷಿತಗೊಳಿಸುತ್ತಿವೆ. ಮನೋಲ್ಲಾಸದ ಜಾಗವನ್ನು ದುರ್ವ್ಯಸನಗಳು ಆಕ್ರಮಿಸಿಕೊಳ್ಳುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿ ಹಿಂದಿನ ಕಾಲದಲ್ಲಿ ಇದ್ದ ಸಾಂಸ್ಕೃತಿಕ ಸನ್ನಿವೇಶವು ಈಗ ಮಾಯವಾಗುತ್ತಿದೆ, ಹಳ್ಳಿಗರು ನಾಟಕಗಳಿಂದ ವಿಮುಖರಾಗುತ್ತಿರುವುದರಿಂದ ರಂಗಭೂಮಿಯು ಬಸವಳಿಯುತ್ತಿದೆ.

ಗ್ರಾಮೀಣ ಬದುಕು ತನ್ನ ಗತಕಾಲದ ಸಾಂಸ್ಕೃತಿಕ ಸಿರಿವಂತಿಕೆಯನ್ನು ಮತ್ತೆ ಪಡೆಯಬೇಕಾದ ಅಗತ್ಯವಿದೆ. ನಾಟಕ ಅಕಾಡೆಮಿಯು ಗ್ರಾಮೀಣ ಪ್ರದೇಶಗಳಲ್ಲಿ ನಾಟಕಗಳನ್ನು ಕಲಿಸಲು ನಾಟಕದ ಮೇಸ್ಟರು ಮತ್ತು ತಬಲಾವಾದಕರನ್ನು ನೇಮಿಸಿ ಅವರಿಗೆ ಸೂಕ್ತವಾದ ಗೌರವಧನವನ್ನು ಕೊಟ್ಟು ಹಳ್ಳಿಯ ಜನರಿಗೆ ನಾಟಕಗಳನ್ನು ಕಲಿಸುವಂತೆ ಮಾಡಿದರೆ ಜನರನ್ನು ಪಾಸಿಟಿವ್ ಆಲೋಚನೆಗಳಲ್ಲಿ ತೊಡಗಿಸಿದಂತಾಗುತ್ತದೆ. ನಾಟಕಗಳನ್ನು ಹಳ್ಳಿಯ ಜನರೇ ಸೇರಿ ಅಭಿನಯಿಸುವುದರಿಂದ ಅದರ ಗಾಢವಾದ ಪ್ರಭಾವ ಅವರ ವ್ಯಕ್ತಿತ್ವದ ಮೇಲೆ ಆಗುತ್ತದೆ. ಶಾಲೆಗೆ ಹೋಗಿಯೂ ಕಲಿಯಲು ಸಾಧ್ಯವಾಗದ ಹೆಚ್ಚಿನ ಶಿಕ್ಷಣವನ್ನು ಪಡೆದಂತಾಗುತ್ತದೆ.

**24.1.2013**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑